## ಇವರು ನಾಡಿ ಡಾಕ್ಟರ್!

ಮನೆಯವರೆಲ್ಲ ಊಟಕ್ಕೆ ಮೊದಲು ಟೀವಿ ಮುಂದೆ ವಿರಾಜಮಾನರಾಗಿದ್ದರು. ಒಳಬಂದವನು ಸಹಜ ಕುತೂಹಲದಿಂದ ನೋಡಿದೆ. ಕಲರ್ಸ್ ಕನ್ನಡದ 'ಲಕ್ಷ್ಮೀನಿವಾಸ' ಧಾರಾವಾಹಿ. ಮಗಳು ಸಿಂಚನಾ ಬಳಲಿಕೆಯಿಂದ ಬೆಂಡಾಗಿ ಅಮ್ಮನ ಎದೆಗೊರಗುತ್ತಾಳೆ. ಎಲ್ಲರ ಮೊಗದಲ್ಲೂ ಆತಂಕ. ಡಾಕ್ಟರಿಗೆ ಫೋನ್ ಮಾಡಲು ಉದ್ಯುಕ್ತರಾಗುತ್ತಾರೆ. ಅಮ್ಮ ದುಗುಡದಿಂದ ಮಗಳ ಕೈಹಿಡಿದು ನಾಡಿ ನೋಡುತ್ತಾಳೆ. ಕ್ಷಣದಲ್ಲಿಯೇ ಮುಖದಲ್ಲಿ ಸಂತಸದ ಹೊಳೆ. 'ಡಾಕ್ಟರ್ ಬೇಡ, ಸಕ್ಕರೆ ತನ್ನಿ' ಎನ್ನುತ್ತಾಳೆ. ಮನೆಯವರಿಗೆಲ್ಲ ಅಚ್ಚರಿ! 'ಸಿಂಚನ ತಾಯಿಯಾಗುತ್ತಿದ್ದಾಳೆ' ಅಬ್ಬಾ! ವೈದ್ಯಕೀಯ ಓದದೇ ನಾಡಿ ಬಡಿತದಿಂದ ಮಗಳು ಗರ್ಭವತಿಯೆಂದು ಅರಿಯುವ ಇಂತಹ ಪ್ರತಿಭೆ ಇದ್ದರೆ ನಮಗೆ ಡಾಕ್ಟರ್ ಬೇಡ ಅಲ್ಲವೇ?

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ತಪ್ಪಿಗೆ ಶಿಕ್ಷೆ ಕೊಡುವುದೇ ನ್ಯಾಯ

ಝೀ ಕನ್ನಡದ 'ಅಮೃತಧಾರೆ' ಧಾರಾವಾಹಿ ಆಕರ್ಷಣೀಯ ಎಂದೆನಿಸಿತು. ಬರಬರುತ್ತಾ ಅದರಲ್ಲಿ ಖಳನಾಯಕಿಯರ ಕಾಟ ಜಾಸ್ತಿ ಆಗುತ್ತಿದೆ. ಶಕುಂತಲಾ ಪಾತ್ರಧಾರಿ ತನ್ನ ಮಲ ಮಗನ ಹೆಂಡತಿ ಭೂಮಿಕಾ ಗರ್ಭಧರಿಸುವ ಸಂಭವವೇ ಇಲ್ಲ, ಒಂದು ವೇಳೆ ಆದರೂ ಜೀವಕ್ಕೆ ಅಪಾಯ ಎಂದು ಸುಳ್ಳು ವೈದ್ಯಕೀಯ ವರದಿ ತೋರಿಸುತ್ತಾರೆ.

ನಿಜಕ್ಕೂ ಇದರಿಂದ ವೈದ್ಯಕೀಯ ಲೋಕಕ್ಕೆ ಕಳಂಕ ತರುವ ಹಾಗೂ ಸಮಾಜಕ್ಕೆ ತಪ್ಪು ಸಂದೇಶ ರವಾನೆ ಮಾಡಿದಂತೆ ಆಗುತ್ತದೆ. ಈ ರೀತಿಯ ಸನ್ನಿವೇಶಗಳು ಕಥೆಯಲ್ಲಿ ಸ್ವಲ್ಪ ಮಟ್ಟಿಗಾದರು ಸಹಜತೆಯನ್ನು ತೋರಲಿ. ಸುಳ್ಳು ವರದಿ ನೀಡಿದ ವೈದ್ಯರಿಗೆ ಶಿಕ್ಷೆ ಆಗುವುದನ್ನೂ ತೋರಿಸಿದರೆ ಅದಕ್ಕೊಂದು ನ್ಯಾಯ ಸಿಕ್ಕಂತೆ ಆಗುತ್ತದೆ.

—ಟಿ.ಎಸ್. ರುದ್ರಾರಾಧ್ಯ, ಬೆಂಗಳೂರು

## ಪುರೋಹಿತರೂ ಸಂಪ್ರದಾಯ ಮರೆತರೆ

ಧಾರಾವಾಹಿಗಳಲ್ಲಿ ಗರ್ಭಿಣಿಯರ ದೃಶ್ಯವನ್ನು ನೋಡಲು ಹಿಂಸೆ ಆಗುತ್ತಿದೆ. ಅವರ ಹೊಟ್ಟೆಗೆ ಕಟ್ಟಿದ ಬಟ್ಟೆ ಜಾರುತ್ತದೆ ಎಂಬ ಭಯವೋ, ಮಗು ಮೇಲೆ ತೋರಿಸುವ ವಿಶೇಷ ಕಾಳಜಿಯೋ ಗೊತ್ತಿಲ್ಲ. ಹೊಟ್ಟೆಯ ಮೇಲೆ ಕೈಯಿಟ್ಟುಕೊಂಡು ತಿರುಗುವುದನ್ನು ನೋಡಿದರೆ ಬೆರಗಾಗುತ್ತದೆ. ಯಕ್ಷಗಾನದ ರಾಕ್ಷಸ ವೇಷಧಾರಿಗಳು ದಢೂತಿ ದೇಹ ತೋರಬೇಕೆಂದು ಹೊಟ್ಟೆಗೆ ಅದೆಷ್ಟೋ ಬಟ್ಟೆ ಸುತ್ತಿಕೊಂಡಿರುತ್ತಾರೆ. ವೇದಿಕೆಯ ಮೇಲೆ ಮೈಮರೆತು ಕುಣಿಯುತ್ತಾರೆ. ಅವರನ್ನು ನೋಡಿಯಾದರೂ ಹೊಟ್ಟೆಯ ಮೇಲಿಂದ ಕೈ ತೆಗೆಸಿದರೆ ಚಂದ.

ಕಲರ್ಸ್ ಕನ್ನಡದ 'ರಾಮಾಚಾರಿ'ಯ ಮೃತದೇಹದ ಎದುರು ಚಾರುವಿನ ಅಭಿನಯ ಅತಿಯಾಗಿದ್ದು, ನಾಟಕೀಯ ಎಂದೆನಿಸುತ್ತದೆ. 'ಅತಿಯಾದರೆ ಅಮೃತವೂ ವಿಷ' ಎನ್ನುವ ಮಾತಿದೆ. ಅನುಕಂಪ ಗಿಟ್ಟಿಸುವ ಇಷ್ಟೆಲ್ಲ ಹುನ್ನಾರ ನಡೆಸುವ ಅಗತ್ಯ ಇಲ್ಲ. ಶವದ ಬಾಯಿಗೆ ಅಕ್ಕಿಕಾಳು ಹಾಕುವಾಗ ಅಪ್ರದಕ್ಷಿಣೆ ಬರಬೇಕು. ಎಲ್ಲರೂ ಪ್ರದಕ್ಷಿಣೆ ಬರುತ್ತಾರೆ ಪುರೋಹಿತರೂ ಸಂಪ್ರದಾಯ ಮರೆತರೆ?

—ಪುಷ್ಪಾ ಎನ್.ಕೆ. ರಾವ್, ಉಡುಪಿ

ವಾರದ ಪತ್ರ

## ಊಟದ ಕಾಳಜಿ

'ಊಟ ಯಾವತ್ತೂ ಜನರಿಗೆ ತೃಪ್ತಿ ಕೊಡಬೇಕೇ ಹೊರತು ವಾಕರಿಕೆ ತರುವಂತಿರಬಾರದು' ಎಂಬುದಾಗಿ ಝೀ ಕನ್ನಡದ 'ಪುಟ್ಟಕ್ಕನ ಮಕ್ಕಳು' ಧಾರಾವಾಹಿಯಲ್ಲಿ ಸಹನಾ ವಾದಿಸುವ ಮೂಲಕ ಊಟದ ಮೌಲ್ಯವನ್ನು ಎತ್ತಿ ಹಿಡಿದಿದ್ದಾಳೆ. ರೈಲಿನಲ್ಲಿ ಕೇಟರಿಂಗ್ ಸೇವೆಯವರು ಗುಣಮಟ್ಟದಲ್ಲದ ಆಹಾರ ಕೊಟ್ಟಿದ್ದನ್ನು ಪ್ರಶ್ನಿಸುತ್ತಾಳೆ. ಆಗ ವೈಟರ್, 'ನೀವು ಕೊಡುವ ಚಿಲ್ಲರೆ ಕಾಸಿಗೆ ಒಳ್ಳೆಯ ಊಟ ಬೇರೆ ಕೇಡು' ಎಂದು ಹೇಳುತ್ತಾನೆ. ಅದನ್ನು ಕೇಳಿ ಸಿಡಿದೆದ್ದ ಕಾಳಿ ಮತ್ತು ಕಂಠಿ ಕೇಟರಿಂಗ್ ಸಿಬ್ಬಂದಿ ಜೊತೆ ಕೈ ಕೈ ಮಿಲಾಯಿಸುತ್ತಾರೆ. ಚೈನ್ ಎಳೆದು ರೈಲು ನಿಲ್ಲಿಸಲಾಗುತ್ತದೆ. ಅಲ್ಲಿಗೆ ಬಂದ ಟಿಟಿ ಹತ್ತಿರ ಪ್ರಯಾಣಿಕರು ತಮಗೆ ಆದ ಅನ್ಯಾಯವನ್ನು ಹೇಳಿಕೊಳ್ಳುತ್ತಾರೆ. ಆ ಘಟನೆಯ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುತ್ತಾರೆ.

ಮೇಲಧಿಕಾರಿಗಳ ಜೊತೆ ಮಾತಾಡಿದ ಟಿಟಿ ಕೇಟರಿಂಗ್ ಸರ್ವೀಸ್ ರದ್ದು ಮಾಡಿಸುವಲ್ಲಿ ಯಶಸ್ವಿಯಾಗುತ್ತಾರೆ. ಇದು ಕಥೆ ಆದರೂ ನಿಜಕ್ಕೂ ಸಾಮಾಜಿಕವಾಗಿ ದಕ್ಕಿದ ಜಯದಂತೆ ಕಾಣಿಸುತ್ತದೆ.

—ರಮಣ್ ಶೆಟ್ಟಿ ರೆಂಜಾಳ, ಮುಂಬೈ

## ರಂಜನೀಯ ಮಹಾನಟಿಯರು



ಝೀ ಕನ್ನಡದ 'ಮಹಾನಟಿ'ಯಲ್ಲಿ ಪ್ರೀತಿ ಪ್ರೇಮದ ಸುತ್ತಿನಲ್ಲಿ ಸ್ಪರ್ಧಿಗಳು ಕಿರುತೆರೆಯ ಇತರ ನಟರೊಂದಿಗೆ ಪ್ರಣಯದ ದೃಶ್ಯಗಳಿಗೆ ಡಾನ್ಸ್ ಮಾಡುತ್ತಾರೆ. ಅನಿರೀಕ್ಷಿತ ಈ ಕಾರ್ಯಕ್ರಮ ವಿಶೇಷವಾಗಿತ್ತು. ಕೆಲ ನೃತ್ಯಗಳಿಗೆ ವಸ್ತ್ರ ವಿನ್ಯಾಸ, ಆಂಗಿಕ ಅಭಿನಯ ಸಮಂಜಸ ಎಂದು ಅನ್ನಿಸಲಿಲ್ಲ.

ಕಲಾವಿದರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಇಂತಹ ದೃಶ್ಯಗಳ ಅವಶ್ಯಕತೆ ಇದೆಯಾ? ನಟ ರಾಘವೇಂದ್ರ ಕೆಲವು ನಟಿಯರ ಅನುಕರಣೆ ಮಾಡಿದ್ದು, ಕಲಾವಿದೆ ಪೂಜಾ ಅವರ ತಂದೆ ರಮೇಶ್ ಅಭಿನಯ ಒಳ್ಳೆಯ ರಂಜನೆಯನ್ನು ನೀಡಿತು.

—ಭಾರತೀ ಗಂಗಾಧರ್, ಬೆಂಗಳೂರು

ಝೀ ಕನ್ನಡದ 'ಮಹಾನಟಿ' ರಿಯಾಲಿಟಿ ಶೋ ಕಲಾಸಕ್ತರಿಗೆ ಒಂದು ಪಾಠದಂತೆ ಇದೆ. ಅದರಲ್ಲೂ ತರುಣ್ ಸುಧೀರ್ ಮತ್ತು ರಮೇಶ್ ಅವರ ಅನಿಸಿಕೆಗಳು ಪ್ರಬುದ್ಧವಾಗಿದ್ದವು. ರಾಘವೇಂದ್ರ ಅವರ ಅಭಿನಯ, ಸ್ತ್ರೀ ಪಾತ್ರ ನಿರ್ವಹಣೆ ಸಾಟಿಯಿಲ್ಲ. ಅದೇ ರೀತಿ ಅವರ ಬೇರೆ ಬೇರೆ ಪಾತ್ರಗಳ ನಿರೂಪಣೆ ಕೂಡ ಚೆನ್ನಾಗಿತ್ತು.

—ಕೆ.ಎಸ್. ಸೋಮೇಶ್ವರ

## ಎನ್ನ ಕಿವುಡನ ಮಾಡಯ್ಯ ತಂದೆ

ಧಾರಾವಾಹಿಗಳ ಒಂದು ಸಂಚಿಕೆಯ ಅವಧಿ 30 ನಿಮಿಷ ಮಾತ್ರ. ಅದು ಸಾಲದು ಎಂಬಂತೆ ಮಹಾಸಂಚಿಕೆ ಎಂಬ ಕಾರ್ಯಕ್ರಮಕ್ಕೆ ಎರಡು ಧಾರಾವಾಹಿಗಳನ್ನು ಸೇರಿಸಿ ಒಂದು ಗಂಟೆಯವರೆಗೂ ಎಳೆದು ಪ್ರಸಾರ ಮಾಡಿದರೂ ಕಥೆ ಮಾತ್ರ ಅರ್ಥಪೂರ್ಣವಾಗಿ ಅನಾವರಣ ಆಯಿತು ಎಂದು ಅನ್ನಿಸುವುದಿಲ್ಲ. ಅದರ ನಡುವೆ 'ಮುಂದಿನ ಭಾಗದಲ್ಲಿ' ಎಂದು ತೋರಿಸುವ ಮುಖ್ಯ ಘಟನೆಯ ತುಣುಕುಗಳನ್ನು ಪದೇ ಪದೇ ತೋರಿಸಿ ಬೇಸರ ಮೂಡಿಸುತ್ತಾರೆ. ಹೀಗಾಗಿ ಮೂಲ ಧಾರಾವಾಹಿಯ ಕಥೆಯನ್ನು ನೋಡುವ ಉತ್ಸಾಹವೇ ಉಡುಗಿ ಹೋಗುತ್ತಿದೆ.

'ಶ್ರೀ ರಸ್ತು ಶುಭ ಮಸ್ತು'ನಲ್ಲಿ ಮಾಧವ ಮತ್ತು ತುಳಸಿ ಹಾಗೂ ರಾಧಾಳ ಸಂಭಾಷಣೆಗೆ ಅಂತ್ಯವೇ ಇಲ್ಲದಂತೆ ಆಗಿದೆ. ಇದೆಲ್ಲ ಕೇಳದಂತೆ 'ಎನ್ನ ಕಿವುಡನ ಮಾಡಯ್ಯ ತಂದೆ' ಎಂದು ಬೇಡುವ ಸ್ಥಿತಿಯಲ್ಲಿ ವೀಕ್ಷಕನಿದ್ದಾನೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು